ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.
ಸಿಸಿ ನಂಬರ್:- 513/2023

| | | | |
|---|---|---|---|
| ಸಾಕ್ಷಿಯ ಹೆಸರು | : ಸುಭಲ್ ಕಲಾಜ್ | | ಸಿ.ಡಬ್ಲ್ಯು 2 |
| ತಂದೆಯ ಹೆಸರು | : | ಹಿಂದೂ ರಾವ್ | ಪಿ.ಡಬ್ಲ್ಯು 4 |
| ವಯಸ್ಸು | : | 34 ವರ್ಷ | |
| ಉದ್ಯೋಗ | : | ಅಬಕಾರಿ ಪೇದೆ | |
| ವಾಸ ಸ್ಥಳ | : | ತರೀಕೆರೆ | |

ದಿನಾಂಕ:04.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-

ನಾನು 2019 ನೇ ಸಾಲಿನಿಂದ ಇಲ್ಲಿಯವರೆಗೆ ತರೀಕೆರೆಯಲ್ಲಿ ಅಬಕಾರಿ ಪೇದೆ ಎಂದು ಕೆಲಸ ಮಾಡುತ್ತಿದ್ದೇನೆ.

ಈ ಪ್ರಕರಣದಲ್ಲಿ ದಿನಾಂಕ 04-11-2022 ರಂದು ಬೆಳಗ್ಗೆ ಇಲಾಖಾ ವಾಹನದಲ್ಲಿ ಚಾಸಾ-1 ರವರೊಂದಿಗೆ ನಾನು ಗಸ್ತು ಕರ್ತವ್ಯದಲ್ಲಿದ್ದಾಗ ಚಾಸಾ-3 ರವರಿಗೆ ಅಜ್ಜಂಪುರ ತಾಲ್ಲೂಕಿನ ನಾಗವಂಗಲ ಗೇಟ್ ಹತ್ತಿರ ಒಬ್ಬ ಆಸಾಮಿ ಮದ್ಯ ಸಾಗಾಣಿಕೆ ಮಾಡುತ್ತಿದ್ದಾನೆ ಎಂಬ ಬಾತ್ಮಿ ಬಂದಿತ್ತು. ಆ ಪ್ರಕಾರ ನಾವು ಅದೇ ವಾಹನದಲ್ಲಿ ಬಾತ್ಮಿ ಬಂದ ಸ್ಥಳಕ್ಕೆ ಬೆಳಗ್ಗೆ 9.15 ಕ್ಕೆ ಹೊರಟೆವು. ಮಾರ್ಗ ಮಧ್ಯೆದಲ್ಲಿ ಪಂಚರನ್ನು ಕರೆದರೆ ಯಾರೂ ಬರಲು ಒಪ್ಪಿಕೊಳ್ಳಲಿಲ್ಲ. ಆ ಕಾರಣಕ್ಕೆ ಚಾಸಾ-3 ರವರು ನನ್ನನ್ನು ಮತ್ತು ಚಾಸಾ-2 ರವರನ್ನೇ ಪಂಚರಾಗಿ ವ್ಯವಹರಿಸಲು ತಿಳಿಸಿದರು. ಅದರಂತೆ ನಾವು ಮಾಹಿತಿ ಬಂದ ಸ್ಥಳಕ್ಕೆ 9.45 ಕ್ಕೆ ಹೋದಾಗ ಅಲ್ಲಿ ಒಬ್ಬ ಆಸಾಮಿ ಕಪ್ಪು ಕವರನ್ನು ಹಿಡಿದುಕೊಂಡು ನಿಂತಿರುವುದು ಕಂಡು ಬಂತು. ಅನುಮಾನ ಬಂದು ನಾವು ದಾಳಿ ಮಾಡಿದಾಗ ಆತನು ಓಡಿ ಹೋಗಲು ಪ್ರಯತ್ನ ಮಾಡಿದನು, ನಾವು ಪ್ರಯತ್ನ ಮಾಡಿ ಹಿಡಿದುಕೊಂಡಿದೆವು. ಚಾಸಾ-3 ರವರು ವ್ಯಕ್ತಿಯ ಹೆಸರನ್ನು ಕೇಳಿದಾಗ ಚೇತನ್ ಬಿನ್ ಪರಮೇಶ ಎಂದು ತಿಳಿಸಿದನು. ಆತನ ಬಳಿ ಇದ್ದ ಪ್ಲಾಸ್ಟಿಕ್ ಕವರನ್ನು ಪರಿಶೀಲಿಸಿದಾಗ ಅದರಲ್ಲಿ 90 ಎಂ ಎಲ್ ನ 40 ರಾಜಾ ವಿಸ್ಕಿ ಪೌಚುಗಳು ಇದ್ದವು. ಅವುಗಳನ್ನು ಇಟ್ಟುಕೊಳ್ಳಲು ಅಥವಾ ಸಾಗಾಣಿಕೆ ಮಾಡಲು ವ್ಯಕ್ತಿ ಬಳಿ ಯಾವುದೇ ಪರವಾನಿಗೆ ಇರಲಿಲ್ಲ. ಅದರ ಮೇಲಿನ ಭದ್ರತಾ ಚೀಟಿಗಳನ್ನು ಕೂಡಾ ಹರಿದು ಹಾಕಲಾಗಿತು. ಅದಲ್ಲದೇ ವ್ಯಕ್ತಿ 150/- ರೂ. ನಗದು ಹಣ ಕೂಡ ಇತ್ತು. ಚಾಸಾ-3 ರವರು ನನ್ನ ಮತ್ತು ಚಾಸಾ-1 ರವರ ಸಮಕ್ಷಮ ಪಂಚನಾಮೆ ಜರಜುಗಿಸಿ ಮದ್ಯವನ್ನು ಮತ್ತು ಆರೋಪಿಯನ್ನು ತಮ್ಮ ವಶಕ್ಕೆ ಪಡೆದುಕೊಂಡರು. ಸ್ಥಳದಲ್ಲಿ ಮುಂಜಾನೆ 9.45 ರಿಂದ 10.45 ರವರೆಗೆ ಪಂಚನಾಮೆ ಬರೆಯಲಾಯಿತು. ನಂತರ ಆರೋಪಿ ಮತ್ತು

ಮುದ್ದೆಮಾಲಿನೊಂದಿಗೆ ಕಛೇರಿಗೆ ಬಂದು, ಚಾಸಾ-3 ರವರು ಮುಂದಿನ ಕ್ರಮ ತೆಗೆದುಕೊಂಡಿರುತ್ತಾರೆ. ಮಹಜರ್ ಮೇಲಿನ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ನಮ್ಮ ಕಛೇರಿಯಲ್ಲಿ ಯಾವ ಸಿಬ್ಬಂದಿ ಯಾವ ಮಾರ್ಗದಲ್ಲಿ ಗಸ್ತು ಕರ್ತವ್ಯಕ್ಕೆ ಹೋಗಬೇಕು ಎಂಬ ಬಗ್ಗೆ ರೆಜಿಸ್ಟರ್ ಇರುತ್ತದೆ ಎಂದರೆ ಸರಿ. ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಚಾಸಾ-3 ರವರು ಕೊಡಬಹುದು ನನಗೆ ಗೊತ್ತಿಲ್ಲ. ನಾಗವಂಗಲ ಗೇಟ್ ಹತ್ತಿರ ಸಾಕಷ್ಟು ಜನ ಸಂಚಾರ ಮತ್ತು ವಾಹನ ಸಂಚಾರ ಇರುತ್ತದೆ ಎಂದರೆ ಸರಿ. ನಾವು ಯಾವ ವ್ಯಕ್ತಿಯನ್ನು ಪಂಚರಾಗಲು ಕರೆದಿದ್ದೆವು ಎಂದು ಈಗ ನೆನಪಿಲ್ಲ. ಅವರ ವಿವರಗಳು ಕೂಡಾ ಈಗ ನೆನಪಿಲ್ಲ. ಭದ್ರತಾ ಚೀಟಿಗಳನ್ನು ಹರಿದು ಹಾಕಿದ್ದ ಕಾರಣ ಬ್ಯಾಚ್ ನಂಬರ ಮತ್ತು ತಯಾರಿಕಾ ದಿನಾಂಕ ಸರಿಯಾಗಿ ಹೇಳಲು ಆಗುವುದಿಲ್ಲ. ಮು.ಮಾ.1 ರಂತಹ ಮದ್ಯದ ಪೌಚುಗಳು ಸಾಮಾನ್ಯವಾಗಿ ಎಲ್ಲಾ ಸಿಗುತ್ತವೆ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದಂತೆ ಚಾಸಾ-3 ರವರೊಂದಿಗೆ ಯಾವುದೇ ದಾಳಿಗೆ ಹೋಗಿಲ್ಲ, ಚಾಸಾ-3 ರವರಿಗೆ ಯಾವುದೇ ಬಾತ್ಮಿ ಬಂದಿಲ್ಲ, ನನ್ನ ಸಮಕ್ಷಮ ಚಾಸಾ-3 ರವರು ಆರೋಪಿಯಿಂದ ಮದ್ಯವನ್ನು ಅಥವಾ ನಗದನ್ನು ಅಮಾನತಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಠಾಣೆಯಿಂದ ಪಂಚರನ್ನು ಕರೆಸಿಕೊಳ್ಳಲು ನಮಗೆ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ಕಛೇರಿಯ ಅಂಕೆ ಸಂಖ್ಯೆಗೋಸ್ಕರ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ-3 ನನ್ನ ಮೇಲಾಧಿಕಾರಿ ಎಂದರೆ ಸರಿ, ಅವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ.

<u>ಮರುವಿಚಾರಣೆ :</u> ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.